# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 175/2024

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಮಂಜುನಾಥ | ಸಿಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | – | ಪೆರುಮಾಳ್ ಖಂದಾರ್ | ಪಿಡಬ್ಲ್ಯೂ-1 |
| ವಯಸ್ಸು | – | ಸು. 55 ವರ್ಷ | ಪ್ರ.ವ.ಬೋ |
| | | | ದಿನಾಂಕ:19.10.2024 |
| ಉದ್ಯೋಗ | – | ಇಲೇಕ್ಟ್ರಿಷಿಯನ್ | |
| ವಾಸ | – | ಹರೀಚಂದ್ರಘಾಟ್ | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:–**

ಮೃತ ಗಾಯಿತ್ರಿ @ ಗಾಯಿತ್ರಮ್ಮ ನನ್ನ ಹೆಂಡತಿ, ಚಾಸಾ-2, 3 ಪರಿಚಯ ಇರುವುದಿಲ್ಲ. 2022ರಲ್ಲಿ ಒಂದು ದಿನ ನಾನು ಮನೆಯಲ್ಲಿರುವಾಗ ರಾತ್ರಿ ನನ್ನ ಹೆಂಡತಿ ಹಿರಿಯೂರು ನಗರಕ್ಕೆ ಬಂದಿದ್ದಳು. ರಾತ್ರಿ ಮನೆಗೆ ಬಂದಿರುವುದಿಲ್ಲ. ಅಳವ ಫೋನ್ ಬಂದಾಗಿತ್ತು. ಬೆಳಿಗ್ಗೆ ಪೊಲೀಸ್‌ರು ನಮ್ಮ ಮನೆಗೆ ಬಂದು ಅಪಘಾತದಲ್ಲಿ ನನ್ನ ಹೆಂಡತಿ ಮೃತಪಟ್ಟಿರುತ್ತಾಳೆ ಎಂದು ತಿಳಿಸಿದರು. ನಾನು ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಹೆಂಡತಿ ಕೈ ಮುರಿದು ತಲೆಗೆ ಪೆಟ್ಟಾಗಿತ್ತು. ನನ್ನ ಹೆಂಡತಿ ಆಟೋ ರಿಕ್ಷಾದಲ್ಲಿ ಬರುತ್ತಿರುವಾಗ ಹುಳಿಯಾರ್ ರಸ್ತೆಯಲ್ಲಿರು ವೇದಾವತಿ ಕಾಲೇಜ್ ಹತ್ತಿರ ಬರುತ್ತಿರುವಾಗ ಆಟೋ ಪಲ್ಟಿಯಾಗಿ ಅಪಘಾತವಾಗಿರುತ್ತದೆ ಎಂದು ತಿಳಿಯಿತು. ಅಪಘಾತದ ಬಗ್ಗೆ ನಾನು ಪೊಲೀಸ್‌ರಿಗೆ ದೂರು ನೀಡಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ದೂರನ್ನು **ನಿಪಿ-1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ಅಪಘಾತವು ಆಟೋ ಚಾಲಕನ ತಪ್ಪಿನಿಂದ ಆಗಿರುತ್ತದೆ. ಆಟೋ ಚಾಲಕ ಚಾಲನಾ ಪರವಾಣಿಗೆ ಇಲ್ಲದೆ ವಾಹನಕ್ಕೆ ವಿಮೆ ಇಲ್ಲದೇ ವಾಹನ ಚಲಾಯಿಸಿದ್ದರಿಂದ ಅಪಘಾತವಾಗಿರುತ್ತದೆ. ಆಟೋ ಚಾಲಕ

ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯಾಗಿದ್ದು ಅವರ ಹೆಸರು ಶಂಕರ ಎಂದು ತಿಳಿಯಿತು.

ಸಾಕ್ಷಿಗೆ ಸ್ಥಳ ಪಂಚನಾಮೆ ಮತ್ತು ನಕಾಶೆಯನ್ನು ತೋರಿಸಿದ್ದು, ಅವುಗಳಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಗಳನ್ನು **ನಿಪಿ-2 ಮತ್ತು 3** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು **ನಿಪಿ-2(ಎ) ಮತ್ತು ನಿಪಿ-3(ಎ)** ಎಂದು ಗುರುತಿಸಲಾಯಿತು. ನಿಪಿ-2 ಮತ್ತು 3 ಕ್ಕೆ ನಾನು ದೂರು ನೀಡುವಾಗ ಹಿರಿಯೂರು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೊಲೀಸ್ ರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ ಮತ್ತು ಯಾವುದೇ ನಕಾಶೆ ತಯಾರಿಸಿವುದಿಲ್ಲ. ನಿಪಿ-2 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ಅದಾದ ಬಳಿಕ ನಾನು ಮತ್ತೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ-ಸವಾಲುಃ ಮಾನ್ಯ ಎಪಿಪಿಯವರಿಂದಃ-**

ದಿನಾಂಕಃ01.11.2022 ರಂದು ಅಪಘಾತ ಸ್ಥಳಕ್ಕೆ ಪೊಲೀಸರು ಬಂದಿದ್ದು, ನಾನು ತೊರಿಸಿಕೊಟ್ಟಂತೆ ಪಂಚರಾದ ಚಾಸಾ-5 ಮತ್ತು 6 ರವರ ಸಮಕ್ಷಮ ಪೊಲೀಸರು ನಿಪಿ-2 ರಂತೆ ಸ್ಥಳ ಪಂಚನಾಮೆ ಮಾಡಿ, ನಿಪಿ-3 ರಂತೆ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ-ಸವಾಲುಃ ಆರೋಪಿ ಪರ ಶ್ರೀ ಕೆ.ವಿ.ಡಿ. ವಕೀಲರಿಂದಃ-**

1 ನೇ ಆರೋಪಿ ಅಪಘಾತಕ್ಕಿಂತ ಮೊದಲಿನಿಂದಲೂ ಪರಿಚಯ ವಿರುತ್ತಾರೆ. ಹಿರಿಯೂರು ನಗರದಿಂದ ಹರಿಶ್ಚಂದ್ರ ಘಾಟ ವರೆಗೆ ರಸ್ತೆ ಏರು ಮುಖವಾಗಿರುತ್ತದೆ ಎಂದರೆ ಸರಿ. ಆದ ಕಾರಣ

ವಾಹನಗಳು ಅತೀ ವೇಗವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿ. 2021–22 ರಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅಪಘಾತ ಸ್ಥಳದ ರಸ್ತೆ ಜಲ್ಲಿ ಕಲ್ಲುಗಳು ಇದ್ದವು ಎಂದರೆ ಸರಿಯಲ್ಲ. 2022 ರಲ್ಲಿ ದ್ವಿಪತದ ರಸ್ತೆ ಕಾಮಗಾರಿ ನಡೆದಿರುವುದಿಲ್ಲ. ಅಪಘಾತ ಸ್ಥಳದಲ್ಲಿ ಈಗ ಹಂಪ್ಸ್ ಹಾಕಿರುತ್ತಾರೆ. ಅಪಘಾತದ ಸಮಯದಲ್ಲಿ ಇರಲಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ನಾನು ದೂರು ನೀಡಿದ ನಂತರ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನಿಪಿ–1 ರಲ್ಲಿರುವ ವಿವರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ–1 ನ್ನು ನನಗೆ ಓದಿ ಹೇಳಿರುತ್ತಾರೆ. ಆರೋಪಿಯ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಎರಡೂ ಸಹಿಗಳನ್ನು ಮಾಡಿರುತ್ತೇನೆ. ನಾನು ಸಹಿ ಮಾಡಿದ ಹಾಳೆಗಳು ಖಾಲಿ ಇದ್ದವು. ಆರೋಪಿಯಿಂದ ವಿಮಾ ಪರಿಹಾರ ಪಡೆಯುದಕ್ಕೋಸ್ಕರ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಾಹನವನ್ನು ಹೊಂದಿರುವುದಿಲ್ಲ. 2 ನೇ ಆರೋಪಿ ಪರಿಚಯವಿರುತ್ತಾರೆ. 2 ನೇ ಆರೋಪಿಗೆ ದಿನಾಂಕ.14.12.2020 ರಂದು ತಮ್ಮ ಆಟೋವನ್ನು ರಂಗಸ್ವಾಮಿ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.